# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 893 |
| ಸದಸ್ಯರ ಹೆಸರು | ಶ್ರೀ ಶರವಣ ಟಿ. ಎ<br>(ವಿಧಾನ ಸಭೆಯಿಂದ ಚುನಾಯಿತ್ರಾದವರು) |
| ಉತ್ತರಿಸುವ ದಿನಾಂಕ | 14-07-2023 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೃಷಿ ಬೆಲೆ ಆಯೋಗ ಸ್ಥಾಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮದ ಸಂಪೂರ್ಣ ಮಾಹಿತಿಯನ್ನು ನೀಡುವುದು; | ದಿನಾಂಕ 12-07-2013 ರ ಆಯವ್ಯಯ ಭಾಷಣದ ಕಂಡಿಕೆ-50 ರಲ್ಲಿ ಪ್ರಸ್ತಾಪಿಸಿದಂತೆ, ದಿನಾಂಕ 31-01-2014 ರ ಸರ್ಕಾರಿ ಆದೇಶ ಸಂಖ್ಯೆ: ಕೃಇ 61 ಕೃಉಇ 2013, ಬೆಂಗಳೂರು ಅನ್ವಯ ಕೃಷಿ ಬೆಲೆ ಆಯೋಗವನ್ನು ರಚಿಸಿ ಅಧಿಸೂಚನೆ ಹೊರಡಿಸಲಾಯಿತು ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಕೃಇ 12 ಕೃಉಇ 2014, ದಿನಾಂಕ:25-06-2014 ರನ್ವಯ ಕೃಷಿ ಬೆಲೆ ಆಯೋಗಕ್ಕೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸಿ ಆದೇಶಿಸಲಾಯಿತು. ಮೊದಲಿಗೆ ಆಯೋಗದ ಅವಧಿಯು ಮೂರು ವರ್ಷಗಳಿದ್ದು (ದಿನಾಂಕ: 25-06-2014 ರಿಂದ 25-06-2017ರ ವರೆಗೆ) ನಂತರ ಆಯೋಗವನ್ನು ಎರಡು ಬಾರಿ ವಿಸ್ತರಿಸಲಾಗಿದೆ (ದಿನಾಂಕ: 26-06-2017 ರಿಂದ 25-06-2020ರ ವರೆಗೆ ಹಾಗೂ ನಂತರ ಮೂರನೇ ಬಾರಿಗೆ ದಿನಾಂಕ:26-06-2020 ರಿಂದ 25-06-2023ರ ವರೆಗೆ). ಅದರಂತೆ ಆಯೋಗವು 25-06-2023 ರವರೆಗೆ ಕಾರ್ಯನಿರ್ವಹಿಸಿದೆ.<br><br>ಕೃಷಿ ಬೆಲೆ ಆಯೋಗವನ್ನು 4ನೇ ಅವಧಿಗೆ ಮುಂದುವರೆಸುವ (ದಿನಾಂಕ:26-06-2023 ರಿಂದ 25-06-2026 ರವರೆಗೆ) ಕುರಿತು ಪರಿಶೀಲಿಸಲಾಗುತ್ತಿದೆ. |
| ಆ) | ರೈತರ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗಧಿಪಡಿಸಲು ಸ್ವಾಮಿನಾಥನ್ ನೇತೃತ್ವದಲ್ಲಿ ರಚಿಸಿದ ಸಮಿತಿಯ ವರದಿಯು ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೇ; | ಕೇಂದ್ರ ಸರ್ಕಾರವು ರೈತರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ 2004 ರಲ್ಲಿ ಡಾ\|\| ಎಂ.ಎಸ್. ಸ್ವಾಮಿನಾಥನ್ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ The National Commission on Farmers (NCF) ಆಯೋಗವು ಡಿಸೆಂಬರ್-2004 ರಿಂದ ಅಕ್ಟೋಬರ್-2006 ರವರೆಗೆ ಒಟ್ಟು 5 ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುತ್ತದೆ. |

| | | |
|---|---|---|
| ಇ) | ಈ ಸಮಿತಿಯು ಮಾಡಿದ ಶಿಫಾರಸ್ಸುಗಳೇನು; ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ ಯಾವ ಕಾಲ ಮಿತಿಯಲ್ಲಿ ಶಿಫಾರಸ್ಸುಗಳನ್ನು ಜಾರಿಗೆ ತರಲಾಗುವುದು? (ವರದಿಯ ಸಂಪೂರ್ಣ ಮಾಹಿತಿಯನ್ನು ನೀಡುವುದು). | ಸಮಿತಿಯು ಸಲ್ಲಿಸಿದ ವರದಿಗಳಲ್ಲಿ ಭೂಸುಧಾರಣೆ, ನೀರಾವರಿ ಸುಧಾರಣೆ, ಸಾಲ ಮತ್ತು ವಿಮೆ, ಉತ್ಪಾದಕತೆಯ ಬೆಳವಣಿಗೆ, ಆಹಾರ ಭದ್ರತೆ, ರೈತರ ಆತ್ಮಹತ್ಯೆ ನಿಯಂತ್ರಣ, ರೈತರ ಸ್ಪರ್ಧಾತ್ಮಕ ಸಾಮರ್ಥ್ಯ ಹೆಚ್ಚಿಸುವುದು ಹಾಗೂ ಬೆಂಬಲ ಬೆಲೆ ನಿಗದಿ ಅಂಶಗಳಿಗೆ ಸಂಬಂಧಿಸಿದ ಶಿಫಾರಸ್ಸುಗಳು ಪ್ರಮುಖವಾಗಿರುತ್ತವೆ. ಬೆಂಬಲ ಬೆಲೆ ನಿಗದಿಗೆ ಸಂಬಂಧಪಟ್ಟಂತೆ ಸರ್ಕಾರವು ಘೋಷಿಸುವ ಬೆಂಬಲ ಬೆಲೆಯು ಸರಾಸರಿ ಬೆಳೆ ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಟ ಶೇ.50ರಷ್ಟು ಹೆಚ್ಚಾಗಿರಬೇಕು ಎಂದು ತಿಳಿಸಲಾಗಿದೆ.<br><br>2018 ರ ಆಯವ್ಯಯದಲ್ಲಿ ಕೇಂದ್ರ ಸರ್ಕಾರವು ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಕಡಿಮೆ ಇಲ್ಲದ ಕನಿಷ್ಠ ಬೆಂಬಲ ಬೆಲೆಯನ್ನು ನೀಡಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಲಾಗಿದೆ. ಅದರಂತೆ ಪ್ರತಿ ವರ್ಷ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸುವ ಸಂದರ್ಭದಲ್ಲಿ ಬೆಳೆ ಉತ್ಪಾದನಾ ವೆಚ್ಚದ ಮೇಲೆ ಶೇಕಡ 50 ಮೊತ್ತವನ್ನು ಸೇರಿಸಿ ಬೆಂಬಲ ಬೆಲೆ ನಿಗದಿಪಡಿಸಲಾಗುತ್ತಿದೆ. |

ಸಂಖ್ಯೆ: AGRI/108/ACT/2023

13/7

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು